ಇಂದು ದಿನಾಂಕಃ 23.10.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿಯ ಪರ ಶ್ರೀ ಎಸ್ ಹೆಚ್ ಜಿ ವಕೀಲರಿಂದಃ

ಪ್ರತಿವಾದಿ 2 ರವರು ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿ ಕಲ್ಲಪ್ಪ ರವರು ಮಾತ್ರ ನನಗೆ ಗೊತ್ತಿರುತ್ತಾರೆ. ಪ್ರತಿವಾದಿಯವರ ಕುಟುಂಬದ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಪ್ರತಿವಾದಿಯರ ಪಡಿತರ ಚೀಟಿಯ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಪ್ರತಿವಾದಿ ಕಲ್ಲಪ್ಪ ರವರಿಗೆ ಪ್ರಮೀಳಾ ಎಂಬುವ ಹೆಂಡತಿಯನ್ನು ಹೊರತುಪಡಿಸಿ ಬೇರೆ ಯಾವ ಹೆಂಡತಿ ಇಲ್ಲ ಎಂದರೆ ಸಾಕ್ಷಿಯು ರುದ್ರಮ್ಮ ಎಂಬುವವರು ಕಲ್ಲಪ್ಪ ರವರ ಹೆಂಡತಿಯಾಗಿದ್ದು ಅವರಿಗೆ ಪ್ರಶಾಂತ ಎಂಬ ಒಬ್ಬ ಮಗ ಇರುತ್ತಾನೆ ಎಂದು ನುಡಿದಿರುತ್ತಾರೆ. ಸದರಿ ಕಲ್ಲಪ್ಪ ರವರಿಗೆ ಚಂದ್ರಶೇಖರ ಎಂಬ ಮಗನನ್ನು ಹೊರತುಪಡಿಸಿ ಬೇರೆ ಯಾವ ಮಕ್ಕಳು ಇಲ್ಲ ಎಂದರೆ ಸರಿಯಲ್ಲ.

2. ಪ್ರತಿವಾದಿ ಕಲ್ಲಪ್ಪ ರವರು ಪ್ರಮೀಳಾ ರವರನ್ನು ಹೊರತುಪಡಿಸಿ ಬೇರೆ ಯಾರನ್ನು ಮದುವೆ ಆಗಿಲ್ಲ ಎಂದರೆ ಸರಿಯಲ್ಲ. ಪರ್ರತಿವಾದಿ ಕಲ್ಲಪ್ಪ ರವರು ತನ್ನ ಕುಟುಂಬಂದ ಅನೂಕೂಲಕ್ಕಾಗಿ ತನ್ನ ಆಸ್ತಿಯನ್ನು ತನ್ನ ಮಗನಾದ ಚಂದ್ರಶೇಃಖರ ರವರಿಗೆ ಭಕ್ಷೀಸು ನೀಡಿರುತ್ತಾರೆ ಆ ಬಗ್ಗೆ ನಿಮಗೆ ಮಾಹಿತಿ ಇದೆಯಾ? ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಆಸ್ತಿಯನ್ನು ರುದ್ರಮ್ಮ ರವರಿಗೆ ಕೊಡಬೇಕೆಂಬ ಕಾರದಿಣಂದ ಅದನ್ನು ತಪ್ಪಿಸುವ ಸಲುವಾಗಿ ಚಂದ್ರಶೇಖರವರಿಗೆ ಭಕ್ಷೀಸು ನೀಡಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ಭಕ್ಷೀಸು ಪತ್ರವನ್ನು ನಾನು ನೋಡಿರುವುದಿಲ್ಲ.

(ಈ ಹಂತರದಲ್ಲಿ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.